Fax: 08282-256262
E-mail:kuvempuacademic@gmail.com

Phone No - 08282-256149
Website: www.kuvempu.ac.in.

ಕುವೆಂಪು ವಿಶ್ವವಿದ್ಯಾಲಯ
ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ, ಜ್ಞಾನಸಹ್ಯಾದ್ರಿ,
ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

ಸಂಖ್ಯೆ:ಕುವಿ:ಶೈವಿ:ಎಸಿ–3:ಬಿ.ಇಡಿ–57: 5085 :2022–23

ದಿನಾಂಕ:02–03–2023

# ಸುತ್ತೋಲೆ

ವಿಷಯ:– 2022–23ನೇ ಶೈಕ್ಷಣಿಕ ಸಾಲಿನ ಎರಡು ವರ್ಷಗಳ ಬಿ.ಇಡಿ. ಕೋರ್ಸಿನ ಪ್ರವೇಶಾತಿ ಸಮಯದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳ ಬಗ್ಗೆ.

*****

2022–23ನೇ ಶೈಕ್ಷಣಿಕ ಸಾಲಿನಲ್ಲಿ ಎರಡು ವರ್ಷಗಳ ಬಿ.ಇಡಿ. ಕೋರ್ಸಿಗೆ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಮಾರ್ಗಸೂಚಿಗಳನ್ನು ಅನುಸರಿಸುವಂತೆ ಎಲ್ಲಾ ಸಂಯೋಜಿತ ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತಿಳಿಸಲಾಗಿದೆ.

ಸದರಿ ಮಾರ್ಗಸೂಚಿಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ **www.kuvempu.ac.in** ನಲ್ಲಿ ಪಡೆಯಬಹುದಾಗಿದೆ.

ಕುಲಸಚಿವರಿಂದ ಅನುಮೋದಿಸಲ್ಪಟ್ಟಿದೆ

ಉಪಕುಲಸಚಿವರು
ಉಪ ಕುಲಸಚಿವ
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ–577451.
ಶಿವಮೊಗ್ಗ ಜಿಲ್ಲೆ.

ಗೆ,
**ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲಾ ಸಂಯೋಜಿತ ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರುಗಳಿಗೆ**

**ಪ್ರತಿಗಳು:**

01 ಆಪ್ತ ಸಹಾಯಕರು: ಕುಲಪತಿ: ಕುಲಸಚಿವ: ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
02 ನಿರ್ದೇಶಕರು, ಯು.ಸಿ.ಸಿ.ಎಫ್. ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮಕ್ಕಾಗಿ.
03 ಕಛೇರಿ ಪ್ರತಿ.

# ಕುವೆಂಪು ವಿಶ್ವವಿದ್ಯಾಲಯ

**2022-23ನೇ ಶೈಕ್ಷಣಿಕ ಸಾಲಿನ ಎರಡು ವರ್ಷಗಳ ಬಿ.ಇಡಿ. (ಸೆಮಿಸ್ಟರ್ ಪದ್ಧತಿ) ಕೋರ್ಸಿನ ಪ್ರವೇಶಾತಿಗೆ ಸಂಬಂಧಿಸಿದಂತೆ ಕಾಲೇಜುಗಳು ಪ್ರವೇಶ ನೀಡುವಾಗ ಪಾಲಿಸಬೇಕಾದ ಮಾರ್ಗಸೂಚಿಗಳು**

ಕುವೆಂಪು ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ:ಕುವಿ:ಶೈವಿ:ಎಸಿ-3: ಬಿಇಡಿ: 27/2: 5018/ 2022-23, ದಿನಾಂಕ:22-02-2023 ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ (ಸಂಖ್ಯೆ:ಸಿಎಸಿ-5/ಬಿಇಡಿ. ದಾ-01/ 2022-23, ದಿನಾಂಕ:10-11-2022) ರನ್ವಯ, 2022-23ನೇ ಸಾಲಿನ ಎರಡು ವರ್ಷಗಳ ಬಿ.ಇಡಿ ಪದವಿ ಪ್ರವೇಶ ಪ್ರಕ್ರಿಯೆ ಕೈಗೊಳ್ಳುವುದು.

1. ಅಭ್ಯರ್ಥಿಯು ಯು.ಜಿ.ಸಿ.ಯಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ ಅಥವಾ ಸ್ನಾತಕೋತ್ತರ ಪದವಿ ಅಥವಾ ಯಾವುದೇ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು. ಪದವಿ ಅಥವಾ ಸ್ನಾತಕೋತ್ತರ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆಯ ನಿಗದಿತ ಎಲ್ಲಾ ಪರೀಕ್ಷೆಗಳನ್ನು ವಿಶ್ವವಿದ್ಯಾಲಯ ಹಂತದ ಪರೀಕ್ಷೆಯಲ್ಲಿಯೇ ಉತ್ತೀರ್ಣರಾಗಿರಬೇಕು. (ವಿದ್ಯಾರ್ಥಿಯು 10+2+3 ಎಸ್.ಎಸ್.ಎಲ್.ಸಿ. ಅಥವಾ 10$^{th}$ + ಎರಡು ವರ್ಷದ ಪಿ.ಯು.ಸಿ. ಅಥವಾ 12$^{th}$ + ಮೂರು ವರ್ಷದ ಪದವಿ ಹೊಂದಿರಬೇಕು).
2. ಯು.ಜಿ.ಸಿ. ಯಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳು ನಡೆಸುವ ಪದವಿ ಅಥವಾ ಸ್ನಾತಕೋತ್ತರ ಪದವಿ ಅಥವಾ ಯಾವುದೇ ತತ್ಸಮಾನ ವಿದ್ಯಾರ್ಹತೆಯ ಎಲ್ಲಾ ವರ್ಷಗಳಲ್ಲಿ / ಸೆಮಿಸ್ಟರ್‌ಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಮತ್ತು ವಿಕಲಚೇತನ **(PWD)** ಅಭ್ಯರ್ಥಿಗಳು ಆಂತರಿಕ ಅಂಕಗಳು ಸೇರಿ ಸರಾಸರಿ ಕನಿಷ್ಠ ಶೇ. 45 ಅಂಕಗಳನ್ನು ಮತ್ತು ಇತರ ಅಭ್ಯರ್ಥಿಗಳು ಆಂತರಿಕ ಅಂಕಗಳು ಸೇರಿ ಸರಾಸರಿ ಕನಿಷ್ಠ ಶೇ.50 ಅಂಕಗಳನ್ನು ಗಳಿಸಿರಬೇಕು. ಇಂಜಿನೀಯರಿಂಗ್ ಪದವಿಧರರು ಪದವಿಯಲ್ಲಿ ಗಣಿತ ಮತ್ತು ವಿಜ್ಞಾನವನ್ನು ಐಚ್ಚಿಕ ವಿಷಯವನ್ನಾಗಿ ವ್ಯಾಸಂಗ ಮಾಡಿ ಎರಡು ವಿಷಯಗಳು ಸೇರಿ ಕನಿಷ್ಠ ಶೇ.55 ಅಂಕಗಳನ್ನು ಪಡೆದಿರಬೇಕು.
3. ಕೆಲವು ವಿಶ್ವವಿದ್ಯಾಲಯಗಳಲ್ಲಿ ಒಂದು ವಿಷಯವನ್ನು (ಉದಾ: Constitution of India, Computer Fundamentals ಇತ್ಯಾದಿ) ಪರೀಕ್ಷಾ ಪೂರಕ ವಿಷಯವನ್ನಾಗಿ (**Subsidiary Subjects**) ಅಧ್ಯಯನ ಮಾಡಬೇಕಾಗಿರುತ್ತದೆ. ಈ ವಿಷಯದ ಅಂಕಗಳನ್ನು ವಿಶ್ವವಿದ್ಯಾಲಯವು ಒಟ್ಟು ಅಂಕಗಳಿಗೆ ಪರಿಗಣಿಸಿದ್ದಲ್ಲಿ ಅದರಂತೆಯೇ ಅಂಕಗಳನ್ನು ನಮೂದಿಸುವುದು, ವಿಶ್ವವಿದ್ಯಾಲಯವು ಪೂರಕ ವಿಷಯಗಳ ಅಂಕಗಳನ್ನು ಪರಿಗಣಿಸದೇ ಇದ್ದಲ್ಲಿ ಆ ಅಂಕಗಳನ್ನು ಹೊರತುಪಡಿಸಿ ಅರ್ಜಿಯನ್ನು ಭರ್ತಿಮಾಡುವುದು.
4. *2022-23 ನೇ ಶೈಕ್ಷಣಿಕ ಸಾಲಿನ ಎರಡು ವರ್ಷಗಳ ಬಿ.ಇಡಿ (ಸೆಮಿಸ್ಟರ್ ಪದ್ಧತಿ) ದಾಖಲಾತಿ ಅಧಿಸೂಚನೆ ದಿನಾಂಕದ ಪೂರ್ವದಲ್ಲಿ ಪರೀಕ್ಷೆ ಬರೆದು ಉತ್ತೀರ್ಣರಾಗಿರುವವರು ಹಾಗೂ ಪರೀಕ್ಷೆ ಬರೆದು ಫಲಿತಾಂಶದ ನಿರೀಕ್ಷೆಯಲ್ಲಿ ಇರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಪ್ರಸಕ್ತ ಶೈಕ್ಷಣಿಕ ಸಾಲಿನ ಬಿ.ಇಡಿ. ಪ್ರವೇಶಾತಿಯ ಕೊನೆಯ ದಿನಾಂಕದೊಳಗೆ ಅಭ್ಯರ್ಥಿಗಳು ಫಲಿತಾಂಶ ಪ್ರಕಟಗೊಂಡ ಪದವಿಯ ಎಲ್ಲಾ ಅಂಕಪಟ್ಟಿಗಳನ್ನು ಸಲ್ಲಿಸತಕ್ಕದ್ದು.*

   *ವಿ.ಸೂ. 2012ರ ಒಳಗೊಂಡ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ (KSOU) ಪದವಿ/ಸ್ನಾತಕೋತ್ತರ ಪದವಿಗೆ ದಾಖಲಾದ ಅಭ್ಯರ್ಥಿಗಳು ಮಾತ್ರ ಅರ್ಹರು*
5. A. Candidates who have obtained degree from Universities outside the Karnataka shall obtain Eligibility Certificate from the Kuvempu University before seeking admission to the B.Ed. Course.

   B. ಈ ಕೆಳಗಿನ ತಖ್ತೆಯಲ್ಲಿನ ವಿಷಯಗಳನ್ನು ಪದವಿ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ಅಧ್ಯಯನ ಮಾಡಿದ ಅಭ್ಯರ್ಥಿಗಳಿಗೆ ಮಾತ್ರ ಪ್ರವೇಶಾತಿ ನೀಡುವುದು.

## SUBJECTS RELATED TO SCHOOL TEACHING SUBJECTS AND METHODS OF TEACHING TO BE OFFERED AT B.Ed LEVEL

**Each candidate has to select two methods as prescribed below**

| Sl. No. | Discipline | Subject Option Available | Content to be practiced as Pedagogy |
|---|---|---|---|
| 01 | Humanity | Kannada, English, Hindi, Urdu, Marathi, Sanskrit (Any other state language, neighbourhood language, provision made by State Government) | Respective Language as First, Second and Third Language, |

| | | | |
|---|---|---|---|
| 02 | Social Science | History and Civics | All the content prescribed in the social science Text Book of the State with emphasis on Social Science Perspective. |
| | | Geography | All the content prescribed in the social science Text Book of the State with emphasis on Geography and Environmental Science Perspective. |
| 03 | Physical Science | Physics | All the content prescribed in the Science Text Book of the State with upto 8$^{th}$ and Physical Science content of 9$^{th}$ and 10$^{th}$ Standard. |
| | | Chemistry | All the content prescribed in the Science Text Book of the State with upto 8$^{th}$ and Physical Science content of 9$^{th}$ and 10$^{th}$ Standard. |
| 04 | Biological Science | Biology | All the content prescribed in the Science Text Book of the State with upto 8$^{th}$ and Biological Science content of 9$^{th}$ and 10$^{th}$ Standard. |
| 05 | Mathematics | Mathematics | All the content prescribed in the Science Text Book of the State with upto 10$^{th}$ Standard Mathematics. |
| 06 | Commerce | Commerce | The content of XI$^{th}$ and XII$^{th}$ as per State Government Provision. |

The Post Graduate Candidates have the option to take Higher Secondary Level subject according to their PG Qualification along with One of the Secondary School Subject. This specialization exists for the 3$^{rd}$Semester and 4$^{th}$ Semester.For the second Semester there are no Pedagogic paper specialized to any school subject. The Pedagogic subject for First Subject will be on any two of the following, one each from any two groups:

| Sl. No | Pedagogy of Discipline | Suitable for the existing State Appointments |
|---|---|---|
| 1 | Humanity | Language Teacher |
| 2 | Social Science | Arts Teacher |
| 3 | Geography and Environment | Arts Teacher |
| 4 | Physical Science and / Biological Science | Science Teacher |
| 5 | Mathematics | Maths Teacher |
| 6 | Commerce | Commerce at Higher Secondary Level |

**Medium of Instruction:**

Medium of Instruction for the course is English. However, Candidates may write the examination in Kannada for all papers except for Language Pedagogy Paper. The Language Pedagogy shall be written as directed in the subject of study.

**ವಿಶೇಷ ಸೂಚನೆ:**

ಹೈದ್ರಾಬಾದ್ ಕರ್ನಾಟಕ ವಲಯದ 371(ಜೆ) ಅಧಿನಿಯಮದಡಿ ನಿಗದಿಪಡಿಸಿರುವ ನಿಯಮಗಳನ್ನು ಅನುಸರಿಸಿ ಆ ಪ್ರದೇಶದ ಅಭ್ಯರ್ಥಿಗಳನ್ನು ಕರ್ನಾಟಕ ಅಭ್ಯರ್ಥಿ ಎಂದು ತೀರ್ಮಾನಿಸಲಾಗುವುದು.

**ಅರ್ಹತೆಗಳು:**

1. ಸರ್ಕಾರಿ ಸೀಟುಗಳಿಗೆ ಅಭ್ಯರ್ಥಿಯು ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಅಭ್ಯರ್ಥಿಯಾಗಿರಬೇಕು."ಕರ್ನಾಟಕದ ಅಭ್ಯರ್ಥಿ ಎಂದರೆ"

   (ಅ) ಸರ್ಕಾರಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ 1ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ. ಅಥವಾ 12ನೇ ತರಗತಿ ಅಥವಾ ಅರ್ಹತಾ ಪರೀಕ್ಷೆಯವರೆಗೆ ಕನಿಷ್ಠ 7 ವರ್ಷಗಳ ವ್ಯಾಸಂಗವನ್ನು ಕರ್ನಾಟಕದಲ್ಲಿ ಮಾಡಿರಬೇಕು. ಹಾಗೂ

   (ಆ) ಎಸ್.ಎಸ್.ಎಲ್.ಸಿ./ 10ನೇ ತರಗತಿ / ದ್ವಿತೀಯ ಪಿ.ಯು.ಸಿ./12ನೇ ತರಗತಿ ಪರೀಕ್ಷೆಯನ್ನು ಕರ್ನಾಟಕದಲ್ಲಿಯೇ ಉತ್ತೀರ್ಣರಾಗಿರಬೇಕು.

   (ಇ) ಎಸ್.ಎಸ್.ಎಲ್.ಸಿ. ಅಥವಾ ಪಿ.ಯು.ಸಿ. ಪರೀಕ್ಷೆಗಳಿಗೆ ನೇರವಾಗಿ ನೋಂದಣಿ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ರಾಷ್ಟ್ರೀಯ ಮುಕ್ತ ಶಾಲೆಯಲ್ಲಿ ಅಧ್ಯಯನ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು 7 ವರ್ಷಗಳ ವ್ಯಾಸಂಗ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾದ ಅಗತ್ಯವಿಲ್ಲ. ಆದರೆ ಈ ಅಭ್ಯರ್ಥಿಗಳು ಕರ್ನಾಟಕದಲ್ಲಿ ಕನಿಷ್ಠ 7 ವರ್ಷಗಳು ವಾಸ ಮಾಡಿದ ಬಗ್ಗೆ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳದ ಪ್ರಮಾಣ ಪತ್ರವನ್ನು ದಾಖಲಾತಿ ಸಮಯದಲ್ಲಿ ಸಲ್ಲಿಸಬೇಕು.ಎಸ್.ಎಸ್.ಎಲ್.ಸಿ. ಅಥವಾ ಪಿ.ಯು.ಸಿ. ಪರೀಕ್ಷೆಗಳಿಗೆ ನೇರವಾಗಿ ನೋಂದಣಿ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ರಾಷ್ಟ್ರೀಯ ಮುಕ್ತ ಶಾಲೆಯಲ್ಲಿ ಅಧ್ಯಯನ ಮಾಡಿ ಉತ್ತೀರ್ಣರಾದ ಅಭ್ಯರ್ಥಿಗಳು, ಕರ್ನಾಟಕ ರಾಜ್ಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ / ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದಿಂದ "ಖಾಸಗಿ ಅಭ್ಯರ್ಥಿ" ಎಂದು ನಮೂದಿಸಿರುವ ಅಂಕಪಟ್ಟಿಯನ್ನಾಗಲಿ ಅಥವಾ ದೃಢೀಕರಣ ಪತ್ರವನ್ನಾಗಲೀ ಸಲ್ಲಿಸಬೇಕು. (ಅಭ್ಯರ್ಥಿಯು ಒಂದು ತರಗತಿ ಅಥವಾ ವರ್ಗದಲ್ಲಿ ಉತ್ತೀರ್ಣರಾಗಲು ಒಂದಕ್ಕಿಂತ ಹೆಚ್ಚು ವರ್ಷಗಳನ್ನು ತೆಗೆದುಕೊಂಡಿದ್ದಲ್ಲಿ ಅಂತಹ ಶೈಕ್ಷಣಿಕ ವರ್ಷಗಳ ವ್ಯಾಸಂಗವನ್ನು ಒಂದು ವರ್ಷ ಎಂದು ಗಣನೆಗೆ ತೆಗೆದುಕೊಳ್ಳಲಾಗುವುದು).

2. ಕೇಂದ್ರೀಕೃತ ದಾಖಲಾತಿ ಘಟಕದ ಮೂಲಕ ದಾಖಲಾಗಲು ಬರುವ ಅಭ್ಯರ್ಥಿಗಳು ದಾಖಲಾತಿ ಘಟಕವು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪ್ರವೇಶ ಪಡೆದಿರತಕ್ಕದ್ದು.

3. 2022-23ನೇ ಶೈಕ್ಷಣಿಕ ಸಾಲಿನ ಬಿ.ಇಡಿ. ಪದವಿ ಪ್ರವೇಶಕ್ಕೆ ಯಾವುದೇ ದಂಡ ಶುಲ್ಕವಿಲ್ಲದೆ ಪ್ರವೇಶ ಪಡೆಯಲು **ಕೊನೆಯ ದಿನಾಂಕ : 15-04-2023 ಆಗಿರುತ್ತದೆ. ₹ 500-00ಗಳ** ದಂಡಶುಲ್ಕದೊಂದಿಗೆ ಪ್ರವೇಶ ಪಡೆಯಲು **ಕೊನೆಯ ದಿನಾಂಕ: 24-04-2023 ಆಗಿರುತ್ತದೆ.** (ಸರ್ಕಾರದ ಸೀಟುಗಳ ಪ್ರವೇಶಾತಿ ಮುಂದೆ ಹೋದಲ್ಲಿ ಈ ದಿನಾಂಕವು ಬದಲಾಗುವ ಸಾಧ್ಯತೆ ಇರುತ್ತದೆ.)

   ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾದ ಶುಲ್ಕವನ್ನು ದಂಡ ಶುಲ್ಕವಿಲ್ಲದೆ ಪ್ರವೇಶದ ಕೊನೆಯ ದಿನಾಂಕದ(15-04-2023) ನಂತರದ 03 ದಿನಗಳೊಳಗಾಗಿ ಹಾಗೂ ದಂಡ ಶುಲ್ಕದೊಂದಿಗೆ ಪ್ರವೇಶದ ಕೊನೆಯ ದಿನಾಂಕ(24-04-2023) ನಂತರದ 03 ದಿನಗಳೊಳಗಾಗಿ ಪ್ರತ್ಯೇಕ ಚಲನ್‌ಗಳಲ್ಲಿ ಕಛೇರಿಗೆ ಸಂದಾಯವಾಗುವಂತೆ ಸಲ್ಲಿಸಬೇಕು. ತಪ್ಪಿದಲ್ಲಿ ಎಲ್ಲಾ ವಿದ್ಯಾರ್ಥಿಗಳ ಪ್ರವೇಶಾತಿಗಳನ್ನು ದಂಡ ಶುಲ್ಕದ ಅವಧಿಯಲ್ಲಿ ಪಡೆಯಲಾಗಿದೆಯೆಂದು ಪರಿಗಣಿಸಿ ದಂಡ ಶುಲ್ಕ ವಿಧಿಸಲಾಗುವುದು.

4. ಎನ್.ಸಿ. ಟಿ. ಇ. ನಿಯಮಾನುಸಾರ ಕಡ್ಡಾಯ ಘೋಷಿಸಿರುವ **ಶೇ.80** ಹಾಗೂ **ಶೇ.90ರಷ್ಟು** ಇಂಟರ್ನ್‌ಶಿಪ್ ಹಾಜರಾತಿ ನಿರ್ಬಂಧಗಳನ್ನು ವಿದ್ಯಾರ್ಥಿಗಳ ಗಮನಕ್ಕೆ ತರತಕ್ಕದ್ದು, ಶೇ.80 ಹಾಜರಾತಿ ಕಡ್ಡಾಯ ಮಾಡಿರುವುದರ ಬಗ್ಗೆ ಹಾಗೂ ಹಾಜರಾತಿ ಕಡಿಮೆ ಬಂದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಬಹುದೆಂಬ ಬಗ್ಗೆ ಲಗತ್ತಿಸಿರುವ ಮುಚ್ಚಳಿಕೆಯಲ್ಲಿ ವಿದ್ಯಾರ್ಥಿಗಳಿಂದ ಬರೆಯಿಸಿಕೊಂಡು, ಸದರಿ ಮುಚ್ಚಳಿಕೆಯನ್ನು ನಿಗದಿತ ನಮೂನೆಯಲ್ಲಿ ಪ್ರವೇಶಾನುಮೋದನೆ ಪಟ್ಟಿಯೊಂದಿಗೆ ವಿಶ್ವವಿದ್ಯಾಲಯಕ್ಕೆ ಕಳುಹಿಸತಕ್ಕದ್ದು.

5. ಹೊರರಾಜ್ಯದ ವಿದ್ಯಾರ್ಥಿಗಳ ಪ್ರವೇಶಗಳನ್ನು ಮಾಡಿಕೊಳ್ಳುವಾಗ, ಅಂತಹ ವಿದ್ಯಾರ್ಥಿಗಳು ಪದವಿಯ ಮೂಲ ದಾಖಲಾತಿಗಳೊಂದಿಗೆ ವಿಶ್ವವಿದ್ಯಾಲಯದಿಂದ **"ಅರ್ಹತಾ ಪ್ರಮಾಣ ಪತ್ರ" (Eligibility Certificate) ಪಡೆದ ನಂತರವೇ, ಪ್ರವೇಶ ಮಾಡಿಕೊಳ್ಳತಕ್ಕದ್ದು.** ಪ್ರವೇಶಾನುಮೋದನೆ ಸಮಯದಲ್ಲಿ ಮೂಲ ದಾಖಲಾತಿಗಳೊಂದಿಗೆ ವಿಶ್ವವಿದ್ಯಾಲಯದ ಅರ್ಹತಾ ಪ್ರಮಾಣ ಪತ್ರವನ್ನು ಸಹ ಸಲ್ಲಿಸತಕ್ಕದ್ದು.

6. ಕರ್ನಾಟಕದ ಅನ್ಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಳ್ಳುವಾಗ ನಿಯಮಾನುಸಾರ ವಿದ್ಯಾರ್ಥಿಗಳು ಅರ್ಹರೆಂದು ದೃಢಪಡಿಸಿಕೊಳ್ಳುವ ಹೊಣೆ ಪ್ರಾಂಶುಪಾಲರದಾಗಿರುತ್ತದೆ. ಪ್ರವೇಶ ಪಡೆಯುವ ಇಂತಹ ಅನ್ಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಅರ್ಹತೆಗೆ ಸಂಬಂಧಿಸಿದಂತೆ, ಅರ್ಹತಾ ಪ್ರಮಾಣ ಪತ್ರ ಹಾಗೂ "ವಲಸೆ ಪ್ರಮಾಣ ಪತ್ರ" ವನ್ನು ಪಡೆದು ಪ್ರವೇಶಾನುಮೋದನೆ ಸಮಯದಲ್ಲಿ ಮೂಲ ದಾಖಲಾತಿಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು.

--4

7. ವಿಶ್ವವಿದ್ಯಾಲಯದ ಸಂಯೋಜನೆ ಆದೇಶದ ಪ್ರಕಾರ ಪ್ರವೇಶ ಮಿತಿಯನ್ನು ಪಾಲಿಸತಕ್ಕದ್ದು, ವಿಶ್ವವಿದ್ಯಾಲಯದಿಂದ ಪಡೆದ " ಸಂಯೋಜನೆ ಆದೇಶ "ಹಾಗೂ ಎನ್.ಸಿ.ಟಿ.ಇ. ಯಿಂದ ಮಾನ್ಯತೆ ಪಡೆದ ಬಗ್ಗೆ ನವೀಕರಣದ ಆದೇಶವನ್ನು ಪ್ರವೇಶ ಪಟ್ಟಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು, ತಪ್ಪಿದಲ್ಲಿ ಪ್ರವೇಶ ಅನುಮೋದನೆಯನ್ನು ತಡೆಹಿಡಿಯಲಾಗುವುದು.
8. ಪ್ರತಿ ಪ್ರವರ್ಗದಲ್ಲಿ ಶೇಕಡ 3 ರಷ್ಟು ಸ್ಥಾನಗಳನ್ನು ಪಿ.ಹೆಚ್. ಕೋಟಾದಡಿ ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಿರಿಸತಕ್ಕದ್ದು, (ಶೇಕಡ 1ರಷ್ಟು ದೃಷ್ಟಿದೋಷವುಳ್ಳವರಿಗೆ, ಶೇಕಡ 1ರಷ್ಟು ಶ್ರವಣದೋಷವುಳ್ಳವರಿಗೆ ಮತ್ತು ಶೇಕಡ 1ರಷ್ಟು ಆರ್ಥೋಪೆಡಿಕ್ ಅಂಗವಿಕಲರಿಗೆ). ಅಲ್ಲದೆ, ವಿವಿಧ ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಸರ್ಕಾರಿ ಆದೇಶದ ಮೇರೆಗೆ ಮೀಸಲಾತಿಯನ್ನು ಅನುಸರಿಸಿ ಪ್ರವೇಶ ನೀಡತಕ್ಕದ್ದು.
9. ಅಭ್ಯರ್ಥಿಯು ಅಂಗವಿಕಲತೆಯ ಕೋಟಾದಲ್ಲಿ ಆಯ್ಕೆಯಾಗಲು ಅಂಗವಿಕಲತೆ ಪ್ರಮಾಣವು ಶೇ 40 ರಿಂದ 75 ರಷ್ಟು ಇರತಕ್ಕದ್ದು. ಇಂತಹ ಅಭ್ಯರ್ಥಿಗಳು ಜಿಲ್ಲಾ ವೈದ್ಯರು/ ಡಿಸ್ಟ್ರಿಕ್ಟ್ ಸರ್ಜನ್ ಹುದ್ದೆಗೆ ಕಡಿಮೆ ಇಲ್ಲದ ವೈದ್ಯಕೀಯ ಅಧಿಕಾರಿಗಳು ನೀಡುವ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
10. ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್ 50 ಎಸ್ಆರ್ಆರ್ 2007 ದಿನಾಂಕ:26–07–2011ರನ್ವಯ ಅಂಗವಿಕಲ ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಇತರ ಎಲ್ಲಾ ಮೂಲ ದಾಖಲೆಗಳೊಂದಿಗೆ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು (ಅನುಬಂಧದಲ್ಲಿ ನೀಡಿರುವ ನಮೂನೆಯಲ್ಲಿ) ಕಡ್ಡಾಯವಾಗಿ ದಾಖಲಾತಿಯ ಸಮಯದಲ್ಲಿ ಸಲ್ಲಿಸತಕ್ಕದ್ದು. ಈ ಪ್ರಮಾಣ ಪತ್ರದಲ್ಲಿ ಅಂಗವಿಕಲತೆಯ ಶೇಕಡಾ ಪ್ರಮಾಣವು ನಮೂದಿತವಾಗಿರಬೇಕು. ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಿರುವ ಅಂಗವಿಕಲ ಅಭ್ಯರ್ಥಿಗಳನ್ನು ಮಾತ್ರ ಅಂಗವಿಕಲ ಮೀಸಲಾತಿಯಲ್ಲಿ ಪರಿಗಣಿಸಲಾಗುವುದು. ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸದಿರುವ ಅಂಗವಿಕಲ ಅಭ್ಯರ್ಥಿಗಳನ್ನು ಅಂಗವಿಕಲ ಮೀಸಲಾತಿಯಲ್ಲಿ ಪರಿಗಣಿಸಲಾಗುವುದಿಲ್ಲ. ಶ್ರವಣ ದೋಷದ ಅಭ್ಯರ್ಥಿಗಳು ತಮ್ಮ ಸ್ವಂತ ಜವಾಬ್ದಾರಿಯೊಂದಿಗೆ ನಿಮ್ಹಾನ್ಸ್ ಆಸ್ಪತ್ರೆ (Nimhans Hospital) ಹೊಸೂರು ರಸ್ತೆ, ಬೆಂಗಳೂರು ಅಥವಾ ಸಂಜಯಗಾಂಧಿ ಅಪಘಾತ ಮತ್ತು ಸಂಶೋಧನಾ ಸಂಸ್ಥೆ ಆಸ್ಪತ್ರೆ, ಜಯನಗರ ಈಸ್ಟ್, ಭೈರಸಂದ್ರ, ಬೆಂಗಳೂರು - ಇಲ್ಲಿ ಆಡಿಯೋಗ್ರಾಂ ಪರೀಕ್ಷೆಗೆ ಒಳಪಟ್ಟು, ಅವರು ನೀಡುವ ವರದಿಯನ್ನು ಜಿಲ್ಲಾ ವೈದ್ಯಕೀಯ ಮಂಡಳಿಯ ಮುಂದೆ ಹಾಜರು ಪಡಿಸಿ, ಜಿಲ್ಲಾ ವೈದ್ಯಕೀಯ ಮಂಡಳಿ ನೀಡುವ ವೈದ್ಯಕೀಯ ಪ್ರಮಾಣ ಪತ್ರವನ್ನು (ಅನುಬಂಧದಲ್ಲಿ ನೀಡಿರುವ ನಮೂನೆಯಲ್ಲಿ) ದಾಖಲಾತಿ ಸಮಯದಲ್ಲಿ ಇತರ ಮೂಲ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು.
11. ಪ್ರವೇಶಾತಿ ಪಡೆದು ದಾಖಲಾದ ಪ್ರತಿ ವಿದ್ಯಾರ್ಥಿಯ ಮಾಹಿತಿಗಳನ್ನು ಹಾಗೂ ದಾಖಲೆಗಳನ್ನು ಕಾಲೇಜಿನಲ್ಲಿ **Upload** ಮಾಡಿದ ನಂತರ ಕಾಲೇಜಿನ ಪ್ರಾಂಶುಪಾಲರು **UUCMS-Online** ನಲ್ಲಿ ದೃಢೀಕರಿಸುವುದು. ದಾಖಲೆಗಳ ನೈಜತೆ ಹಾಗೂ ಮಾಹಿತಿ ದೃಢೀಕರಣಕ್ಕೆ ಸಂಬಂಧಿಸಿದಂತೆ ತಪ್ಪು ಮಾಹಿತಿ ಒದಗಿಸಿದಲ್ಲಿ ಆಯಾ ಕಾಲೇಜಿನ ಪ್ರಾಂಶುಪಾಲರೇ ಹೊಣೆಗಾರರಾಗಿರುತ್ತಾರೆ.
12. ವಿದ್ಯಾರ್ಥಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ಎರಡು ವರ್ಷಗಳ ಬಿ.ಇಡಿ. ಪಠ್ಯಕ್ರಮ ನಿಯಮಾವಳಿಗಳ ಪ್ರಕಾರ ಕಾಲೇಜಿನಲ್ಲಿ ದಾಖಲಾದ ಯಾವುದೇ ವಿದ್ಯಾರ್ಥಿಗಳಿಗೆ ಯಾವುದೇ ಸೆಮಿಸ್ಟರ್‌ನಲ್ಲಿ ಇನ್ನೊಂದು ಕಾಲೇಜಿಗೆ ವರ್ಗಾವಣೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
13. ಸರ್ಕಾರವು ನಿಗದಿಗೊಳಿಸಿರುವ ಶುಲ್ಕಗಳೊಂದಿಗೆ ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕುವಿ:ಶೈವಿ:ಎಸಿ–8:1413 /2022–23, ದಿನಾಂಕ:27–06–2022ರನ್ವಯ ನಿಗದಿಗೊಳಿಸಿರುವ ವಿಶ್ವವಿದ್ಯಾಲಯದ ಈ ಕೆಳಕಂಡ ಶುಲ್ಕಗಳನ್ನು ವಸೂಲಾತಿ ಮಾಡುವುದು.

| Sl. No. | Particulars | Fee | |
|---|---|---|---|
| | | **I year (Semester- I & II)** | **II Year (Semester- III & IV)** |
| 1 | Admission Fee | **200** | **190** |
| 2 | Registration Fee | **600** | **--** |
| 3 | Univ. Development Fund | **175** | **170** |
| 4 | Extra Curri. Activities | **150** | **150** |
| 5 | Literacy | **30** | **30** |
| 6 | Career Guidance Fund | **30** | **30** |
| 7 | NSS | **30** | **30** |
| 8 | Rangers & Rovers | **30** | **--** |
| 9 | Poor Students Fund | **20** | **30** |
| 10 | Sports Development Fund | **660** | **660** |
| 11 | **Eligibility Fees**: a. Other University students<br>b. Other State students | **444**<br>**1945** | - |
| 12 | Penal Fees : **Last date for Admissions(with a Penal Fee of Date:24-04-2023 (1st Year)** | **600** | **600** |
| 13 | Red Cross | **60** | - |

ಮೇಲ್ಕಂಡ ಶುಲ್ಕಗಳನ್ನು ಪ್ರತಿ ವಿದ್ಯಾರ್ಥಿಯಿಂದ ವಸೂಲು ಮಾಡಿ ಅದರಲ್ಲಿ, ಪಠ್ಯೇತರ ಚಟುವಟಿಕೆ ಶುಲ್ಕದ ಬಾಬ್ತು ₹ 150/– ರಲ್ಲಿ ₹ 30/- ಗಳನ್ನುಹಾಗೂ ಕ್ರೀಡಾಭಿವೃದ್ಧಿ ಶುಲ್ಕದ ₹ 660/– ರಲ್ಲಿ ₹ 250/–ನ್ನು ಕಾಲೇಜಿನಲ್ಲಿ ಉಳಿಸಿಕೊಂಡು ಇನ್ನುಳಿದ ಮೊತ್ತವನ್ನು ಪ್ರವೇಶ ಪಡೆದ ಎಲ್ಲಾ ವಿದ್ಯಾರ್ಥಿಗಳಿಂದ ಕ್ರೋಢೀಕರಿಸಿ "ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ" ಜ್ಞಾನ ಸಹ್ಯಾದ್ರಿ, ಶಂಕರಘಟ್ಟ ಶಾಖೆಯಲ್ಲಿ ಪಾವತಿಯಾಗುವಂತೆ ವಿಶ್ವವಿದ್ಯಾಲಯಕ್ಕೆ RTGS / NEFT ಮೂಲಕ ವಿ.ವಿ. ಬ್ಯಾಂಕ್ ಖಾತೆ ಸಂಖೆ: 54023036291, I.F.S.C. Code:SBIN0040759ಕ್ಕೆ ಪಾವತಿಸಿ ಚಲನ್‌ನ ಒಂದು ಮೂಲ ಪ್ರತಿಯನ್ನು ಕಡ್ಡಾಯವಾಗಿ ಪ್ರವೇಶಾನುಮೋದನೆ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು.

ರೆಡ್‌ಕ್ರಾಸ್ ಶುಲ್ಕದ ಬಾಬ್ತು ₹ 60–00ಗಳನ್ನು ಪ್ರತಿ ವಿದ್ಯಾರ್ಥಿಯಿಂದ ವಸೂಲು ಮಾಡಿ, ಶೇ. 30 ರಷ್ಟನ್ನು ಸದರಿ ಸಂಸ್ಥೆಗೆ ಕಳುಹಿಸಿ ಶೇ. 70ರಷ್ಟನ್ನು ಕಾಲೇಜಿನಲ್ಲಿಯೇ ಉಳಿಸಿಕೊಂಡು ರೆಡ್‌ಕ್ರಾಸ್ ಕಾರ್ಯಕ್ರಮಗಳಿಗೆ ವಿನಿಯೋಗಿಸವುದು.

**Details of Fees remitted to the University**

| | |
|---|---|
| Challan No. | |
| Date: | |
| Amount: | |
| Name of the Bank/Branch | |

Place:

Date: **SEAL & SIGNATURE OF THE PRINCIPAL**

14. ಪ್ರವೇಶಾನುಮೋದನೆಗೆ ಸಂಬಂಧಿಸಿದಂತೆ, ಶುಲ್ಕ, ವಿದ್ಯಾರ್ಥಿಗಳ ಮಾಹಿತಿ, ವಿದ್ಯಾರ್ಥಿಗಳ ವರ್ಗವಾರು ಅಂಕಿ ಅಂಶಗಳ ಹಾಗೂ ಮುಚ್ಚಳಿಕೆಗಳನ್ನು ಕ್ರಮವಾಗಿ ಅನುಬಂಧ I, II, III, IV, V, VI ಮತ್ತು VII ರಲ್ಲಿ ನಿರ್ದಿಷ್ಟಪಡಿಸಿರುವಂತೆ ಭರ್ತಿಮಾಡಿ ಸಲ್ಲಿಸತಕ್ಕದ್ದು.
15. ವಿಶ್ವವಿದ್ಯಾಲಯವು ಪ್ರವೇಶಕ್ಕೆ ನಿಗದಿಗೊಳಿಸಿರುವ ಸರ್ಕಾರಿ ಹಾಗೂ ಆಡಳಿತ ಮಂಡಳಿ ಕೋಟಾದ ವಿದ್ಯಾರ್ಥಿಗಳ ಮೂಲ ದಾಖಲಾತಿಗಳನ್ನು ಅನುಬಂಧ-I ರ ನಮೂನೆಯಲ್ಲಿ ವಿವರ ಪಟ್ಟಿಯೊಂದಿಗೆ ತ್ರಿಪ್ರತಿಗಳಲ್ಲಿ ವಿಶ್ವವಿದ್ಯಾಲಯದ ಪರಿಶೀಲನೆಗೆ **ದಿನಾಂಕ:02–05–2023 ರೊಳಗಾಗಿ ಸಲ್ಲಿಸಿ ವಿಶ್ವವಿದ್ಯಾಲಯದಿಂದ ಅನುಮೋದನೆ ಪಡೆಯತಕ್ಕದ್ದು. ತದನಂತರ, ಸಲ್ಲಿಸಿದ ಪ್ರವೇಶ ಪಟ್ಟಿಯನ್ನು ಪರಿಗಣಿಸಲಾಗುವುದಿಲ್ಲ. ವಿಶ್ವವಿದ್ಯಾಲಯದಿಂದ ಪ್ರಕಟಿಸಲಾಗುವ ಶೈಕ್ಷಣಿಕ ವೇಳಾಪಟ್ಟಿಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.**

    ಪ್ರಥಮ ವರ್ಷದ (ಒಂದನೇ ಸೆಮಿಸ್ಟರ್) ಬಿ.ಇಡಿ. ಪದವಿ ತರಗತಿಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಅನುಮೋದನೆ ಪಟ್ಟಿಗಳನ್ನು ತ್ರಿಪ್ರತಿಯಲ್ಲಿ ಸಿದ್ಧಪಡಿಸಿ ಸ್ಪಷ್ಟವಾದ ವಿವರ, ಮುಚ್ಚಳಿಕೆ ಹಾಗೂ ವಿದ್ಯಾರ್ಥಿಗಳ ಅಂಕಿ– ಅಂಶಗಳನ್ನು **ದಿನಾಂಕ:02–05–2023ರೊಳಗಾಗಿ** ಈ ಕಛೇರಿಗೆ ಕಳುಹಿಸುವುದು. ಪೂರ್ಣಮಾಹಿತಿಯನ್ನೊಳಗೊಂಡ ಹಾರ್ಡ್ ಹಾಗೂ ಸಾಫ್ಟ್ ಕಾಪಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
16. ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರಗಳ ಪಟ್ಟಿಯನ್ನು 01 ರಿಂದ 07ರ ವರೆಗಿನ ನಮೂನೆಯಲ್ಲಿ ಭರ್ತಿ ಮಾಡಿ ಕಡ್ಡಾಯವಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು. (ನಮೂನೆ ಲಗತ್ತಿಸಿದೆ)
17. 2022-23ನೇ ಶೈಕ್ಷಣಿಕ ಸಾಲಿನ ತರಗತಿಗಳು ಪ್ರಾರಂಭವಾಗುವ **ದಿನಾಂಕ:13–03–2023.**

ದಿನಾಂಕ: 02–03–2023.
ಸ್ಥಳ: ಶಂಕರಘಟ್ಟ.

ಉಪಕುಲಸಚಿವರು

ಉಪ ಕುಲಸಚಿವ
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ–577451.
ಶಿವಮೊಗ್ಗ ಜಿಲ್ಲೆ.

2/3/2023

# ANNEXURE-I

## STUDENTS ADMISSION APPROVAL LIST OF B.ED. DEGREE (SEMESTER SCHEME ) COURSE FOR THE ACADEMIC YEAR 2022-23

**(In Triplicate)**

**NAME AND ADDRESS OF THE COLLEGE:**

| Sl. No. | Name of the Candidate | Gender | Category | Date of Admission | Name of the University of qualifying degree | Combination Reg. No. Year of passing | Languages Studied | I year scores/max./I Sem | II year scores/max./II Sem. | III year scores/max./III Sem. | IV Semester / Scores / Max. | V Semester / Scores/ Max. | VI Semester / Scores / Max | Total marks scores/ max. | Total % aggregate | Methodology allotted I & II | Content of subjects | University Fee | Re-marks |
|---|---|---|---|---|---|---|---|---|---|---|---|---|---|---|---|---|---|---|---|
| | | | | | | | | | | | | | | | | | | | |
| | | | | | | | | | | | | | | | | | | | |

This is to certify that the above Candidates are admitted as per the Regulation and eligible for B.Ed. Course.

Place:

Date: **SEAL & SIGNATURE OF THE PRINCIPAL**

---

# *ANNEXURE-II*

## STATEMENT SHOWING THE CATEGORY WISE STUDENTS ADMITTED TO B.ED. DEGREE ( SEMESTER SCHEME ) COURSE DURING THE YEAR 2022-23

**NAME OF THE COLLEGE:**

| SC | | ST | | I | | 2A | | 2B | | 3A | | 3B | | GM | | PH | | Others | | Total | | Out of State | | Grand Total | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| B | G | B | G | B | G | B | G | B | G | B | G | B | G | B | G | B | G | B | G | B | G | B | G | B | G |
| | | | | | | | | | | | | | | | | | | | | | | | | | |

Place:

Date: **SEAL & SIGNATURE OF THE PRINCIPAL**

## ANNEXURE-III

ವಿದ್ಯಾರ್ಥಿಯ ಪ್ರವೇಶ ಸಂಖ್ಯೆ: ಕಾಲೇಜಿನ ಹೆಸರು:

ಪ್ರವೇಶ ಪಡೆದ ದಿನಾಂಕ : ಕಾಲೇಜು ಸಂಯೋಜನೆ ಸಂಖ್ಯೆ:

### ಮುಚ್ಚಳಿಕೆ

1) ಶ್ರೀ/ಕುಮಾರಿ______________________________ ಆದ ನಾನು ______________________________ ಕಾಲೇಜಿನಲ್ಲಿ ______________ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ವಿಶ್ವವಿದ್ಯಾಲಯದ ನಿಯಮಾನುಸಾರ ( ಯು.ಜಿ.ಸಿ ನಿಯಮದಂತೆ) ನಿಗದಿಪಡಿಸಿದ ಕಡ್ಡಾಯ ಹಾಜರಾತಿ ಶೇ 85% (ಎಲ್ಲಾ ವಿಷಯಗಳಲ್ಲು)ಇರಬೇಕೆಂಬುದನ್ನು ಮನಗಂಡಿರುತ್ತೇನೆ.

ಶೇ 80% (ಎಲ್ಲಾ ವಿಷಯಗಳಲ್ಲು) ಹಾಜರಾತಿಗಿಂತ ಕಡಿಮೆ ಹಾಜರಾತಿ ಪಡೆದಲ್ಲಿ ವಿಶ್ವವಿದ್ಯಾನಿಲಯದ ನಿಯಮಾನುಸಾರ ( ಯು.ಜಿ.ಸಿ /ಎನ್.ಸಿ.ಟಿ.ಇ ನಿಯಮದಂತೆ) ಪರೀಕ್ಷೆ ತೆಗೆದುಕೊಳ್ಳಲು ಅರ್ಹನಲ್ಲ ಎಂಬುದನ್ನು ಒಪ್ಪಿಕೊಂಡು ಈ ಕೆಳಗೆ ಸಹಿ ಮಾಡಿರುತ್ತೇನೆ.

2) ಶ್ರೀ/ಕುಮಾರಿ______________________________ ಆದ ನಾನು ______________________________ ಕಾಲೇಜಿನಲ್ಲಿ ______________ತರಗತಿಗೆ ಪ್ರವೇಶ ಪಡೆದಿದ್ದು, ವಿಶ್ವವಿದ್ಯಾಲಯದ ವಿನಿಯಮಾನುಸಾರ ಎರಡು ಅವಧಿಗೆ (DOUBLE THE DURATION) ಪದವಿಯನ್ನು ಪೂರೈಸಿಕೊಳ್ಳುವ ಷರತ್ತಿಗೊಳಪಟ್ಟು ಪ್ರವೇಶಾತಿ ಪಡೆದುಕೊಂಡಿರುತ್ತೇನೆ. ಮತ್ತು ಮೇಲ್ಕಂಡ ಅವಧಿಯೊಳಗೆ ಪದವಿಯನ್ನು ಪೂರೈಸಿಕೊಳ್ಳುತ್ತೇನೆಂಬ ಷರತ್ತಿಗೊಳಪಟ್ಟು ಈ ಮುಚ್ಚಳಿಕೆಗೆ ಸಹಿ ಮಾಡಿರುತ್ತೇನೆ.

**ದಿನಾಂಕ:**

**ಸ್ಥಳ :**

**ಪೋಷಕರ ಸಹಿ** **ವಿದ್ಯಾರ್ಥಿ /ನಿಯ ಸಹಿ**

**ಪ್ರಾಚಾರ್ಯರ ಸಹಿ ಮೊಹರಿನೊಂದಿಗೆ**

ಅನುಬಂಧ–IV

## ಬಿ.ಇಡಿ. ಪದವಿಗೆ ಪ್ರವೇಶ ಪಡೆದ ಹೊರ ರಾಜ್ಯದ / ಅನ್ಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಅರ್ಹತಾ ಪ್ರಮಾಣ ಪತ್ರ ವಿವರದ ತಖ್ತೆ:

| ಕ್ರಸಂ. | ವಿದ್ಯಾರ್ಥಿಯ ಹೆಸರು | ಜಾತಿ | ಗರಿಷ್ಠ ಅಂಕ | ಪಡೆದ ಅಂಕ | ಶೇಕಡವಾರು ಅಂಕ | ವಿಶ್ವವಿದ್ಯಾಲಯದ ಹೆಸರು | ರಾಜ್ಯ | ಷರಾ |
|---|---|---|---|---|---|---|---|---|
| 01 | | | | | | | | |
| 02 | | | | | | | | |
| 03 | | | | | | | | |
| 04 | | | | | | | | |

**ANNEXURE V**

# ABSTRACT

## Details of Caste -Wise Number of Students enrolled to B.Ed. Degree Course (Semester Scheme) for the Academic Year – 2022-23

| Sl.No | College | Religion | Category | Caste | I Year | | |
|---|---|---|---|---|---|---|---|
| | | | | | Male | Female | Total |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |

Place:

Date: **SEAL & SIGNATURE OF THE PRINCIPAL**

Annexure-VI

Details of Fees to be remitted to Kuvempu University for the accadamic-year 2022-23

Name of the College :

Taluk ; Dist;

| Sl. No. | Particulars | Amount | | |
|---|---|---|---|---|
| | | Fees for I year (Semester- I & II) | Number of Students | Total Amount |
| 1 | Admission Fee | 200 | | |
| 2 | Registration Fee | 600 | | |
| 3 | Univ. Development Fund | 175 | | |
| 4 | Extra Curri. Activities | 150 | | |
| 5 | Literacy | 30 | | |
| 6 | Career Guidance Fund | 30 | | |
| 7 | NSS | 30 | | |
| 8 | Rangers & Rovers | 30 | | |
| 9 | Poor Students Fund | 20 | | |
| 10 | Sports Development Fund | 660 | | |
| 11 | **Eligibility Fees**:<br>a. Other University students<br>b. Other State students | <br>444<br>1945 | | |
| 12 | Penal Fees : **Last date for Admissions(with a Penal Fee of Date:24-04-2023 (1st Year)** | 600 | | |
| 13 | Red Cross | 60 | | |
| | | Total | | |

**ANNEXURE VII**

# ABSTRACT

## Details of Caste –Wise Number of Students enrolled to B.Ed. Degree Course (Semester Scheme) for the Academic Year (First & Second Year) – 2022-23

| | | Jurisdication | | Other University | | Nation | | International | | Total | |
|---|---|---|---|---|---|---|---|---|---|---|---|
| Sl.No. | Name of the College | M | F | M | F | M | F | M | F | M | F |
| SC | | | | | | | | | | | |
| ST | | | | | | | | | | | |
| OBC | | | | | | | | | | | |
| Other | | | | | | | | | | | |